# ತಾರಕ್ಕ ಬಿಂದಿಗೆ ನಾ ನೀರಿಗೆ ಹೋಗುವೆ

1. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
2. Ref.: Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
3. **Note:** The lyrics, from the above book in Ref. 1, matches with the singer. But the lyrics are totally different in the book in Ref. 2. Hence, they are given separately in grey highlights.

ರಾಗ : ಸೌರಾಷ್ಟ್ರ ತಾಳ : ಛಾಪು

ತಾರಕ್ಕ ಬಿಂದಿಗೆ ನಾ ನೀರಿಗೆ ಹೋಗುವೆ ತಾರೆ ಬಿಂದಿಗೆಯಾ
ಬಿಂದಿಗೆ ಒಡೆದರೆ ಒಂದೇ ಕಾಸು ತಾರೆ ಬಿಂದಿಗೆಯಾ || ಪ ||

ರಾಮ ನಾಮವೆಂಬ ರಸವುಳ್ಳ ನೀರಿಗೆ ತಾರೆ ಬಿಂದಿಗೆಯಾ
ಕಾಮಿನಿಯರ ಕೂಡೆ ಏಕಾಂತವಾಡೇನು ತಾರೆ ಬಿಂದಿಗೆಯಾ || 1 ||

ಗೋವಿಂದ ಎಂಬುವ ಗುಣವುಳ್ಳ ನೀರಿಗೆ ತಾರೆ ಬಿಂದಿಗೆಯಾ
ಆವಾವ ಪರಿಯಲ್ಲಿ ಅಮೃತದ ನೀರಿಗೆ ತಾರೆ ಬಿಂದಿಗೆಯಾ || 2 ||

ಬಿಂದು ಮಾಧವನ ಘಟ್ಟಕ್ಕೆ ಹೋಗುವೆ ತಾರೆ ಬಿಂದಿಗೆಯಾ
ಪುರಂದರ ವಿಠಲಗೆ ಅಭಿಷೇಕ ಮಾಡುವೆ ತಾರೆ ಬಿಂದಿಗೆಯಾ || 3 ||

**Ref. for the below lyrics:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.

ತಾರಕ್ಕ ಬಿಂದಿಗೆ ನೀರಿಗೆ ಹೋಗುವೆ ತಾರೆ ಬಿಂದಿಗೆಯಾ || ಪ ||
ತರಲಾಗದಿದ್ದರೆ ಬಲಿಯಿಟ್ಟು ಬರುವೆನು ತಾರೆ ಬಿಂದಿಗೆಯ || ಪ ||

ಅಚ್ಯುತನೆಂಬುವ ಕಟ್ಟೆಯ ನೀರಿಗೆ ತಾರೆ ಬಿಂದಿಗೆಯ ಅಲ್ಲಿ
ಮತ್ಸರ ಕ್ರೋಧವೆಂಬ ಕೊಡವನು ತೊಳೆವೆನು ತಾರೆ ಬಿಂದಿಗೆಯ || 1 ||

ರಾಮ ನಾಮವೆಂಬ ಸಾರದ ನೀರಿಗೆ ತಾರೆ ಬಿಂದಿಗೆಯ ಹರಿ
ರಾಮ ವೆಂಬುವ ಹರಿದು ಹೋಗುವ ನೀರಿಗೆ ತಾರೆ ಬಿಂದಿಗೆಯ || 2 ||

ಅಜ್ಞಾನ ವೆಂಬ ನೀರ ಚೆಲ್ಲಿ ಬಂದೇನು ತಾರೆ ಬಿಂದಿಗೆಯ
ಸುಜ್ಞಾನ ವೆಂಬುವ ನೀರಿಗೆ ಹೋಹೆನು ತಾರೆ ಬಿಂದಿಗೆಯ || 3 ||

ಗೋವಿಂದನೆಂಬುವ ಗುಣವುಳ್ಳ ನೀರಿಗೆ ತಾರೆ ಬಿಂದಿಗೆಯ
ಚೆಲ್ವ ಬೆಳದಿಂಗಳೊಳು ಚಿಲುಮೆಯ ನೀರಿಗೆ ತಾರೆ ಬಿಂದಿಗೆಯ || 4 ||

ಬಿಂದು ಮಾಧವನ ಏರಿಯಾ ನೀರಿಗೆ ತಾರೆ ಬಿಂದಿಗೆಯ
ಪುರಂದರ ವಿಠ್ಠಲನ ಅಭಿಷೇಕಕೆ ಬೇಕು ತಾರೆ ಬಿಂದಿಗೆಯ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದವನ್ನು ರಚಿಸಿದ ಸಂದರ್ಭ ತಿಳಿಯುವುದಿಲ್ಲ. ಆದರೆ ಇಲ್ಲಿ ಬಿಂದಿಗೆಯೆಂದರೆ ಸಾಧಕ ಪ್ರಯೋಜಕವಾದ ಶರೀರ. ನೀರಿಗೆ ಹೋಗುವುದು ಬಿಂಬಾಪರೋಕ್ಷ. ಬಿಂದಿಗೆ ಒಡೆಯುವುದು ಶರೀರಪಾತ; ಮರಣ. ಕಾಮಿನಿಯರ ಕೂಡೆ ಏಕಾಂತವಾಡುವುದೆಂದರೆ ತತ್ತ್ವಾಭಿಮಾನಿಗಳ ಸಾಕ್ಷಾತ್ಕಾರ.

ಕಾಶಿ / ವಾರಾಣಸಿ ಯಲ್ಲಿ ಇರುವ ವಿಷ್ಣುವಿನ ರೂಪ ಬಿಂದು ಮಾಧವ. ಪುರಂದರ ದಾಸರು ಇಲ್ಲಿನ ಬಿಂದು ಮಾಧವನನ್ನು ಪದದಲ್ಲಿ ಉಲ್ಲೇಖಿಸಿದ್ದಾರೆ. ಇದೊಂದು ಮುಂಡಿಗೆ.

**Classification:** Mundige
**Ankita:** purandara vittala
**Location:** Kashi / Varanasi, UP.
**Category:** jeevanoddhara, mukti marga
**Group Words:** Vishnu, govinda, rama, amruta, Madhava, abhisheka, kashi,
**Pravachana:** Kallapur Pavamanachar
**Explanation:** NA